ಶ್ರೀ ಅಂಜನಮೂರ್ತಿ : ಪೇಪರ್‌ನಲ್ಲಿ ಈ ಕಲ್ಯಾಣ ಯೋಜನೆಗೋಸ್ಕರ ಸಾವಿರಾರು ಕೋಟಿ ರೂಪಾಯಿಗಳನ್ನು ಬಜೆಟಿನಲ್ಲಿ ಉಪಯೋಗ ಮಾಡುತ್ತೇವೆ ಎಂದಿರುತ್ತದೆ. ತಮಗೆ ಗೊತ್ತಿರುವ ಹಾಗೆ ಕೊಟ್ಟಿಗಟ್ಟಲೆಯಷ್ಟು ಹಣ ಇದರಲ್ಲಿ ಲ್ಯಾಪ್ಸ್ ಆಗುತ್ತದೆ. ಅದಕ್ಕೆ ಬದಲಾಗಿ ಇಂಥ ವಿದ್ಯಾರ್ಥಿಗಳಿಗೆ ಹೆಚ್ಚು ಹಣ ಕೊಡಬೇಕು. ಮೆಟ್ರಿಕ್ ಪೂರ್ವದ ವಿದ್ಯಾರ್ಥಿಗಳಿಗೆ 400 ರೂಪಾಯಿಗಳನ್ನು, ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ 500 ರೂಪಾಯಿಗಳನ್ನು ಕೊಡತಕ್ಕ ಆದೇಶವನ್ನು ಮಾಡುವ ಬಗ್ಗೆ ಈ ಸದನದಲ್ಲಿ ಮಾನ್ಯ ಸಚಿವರಿಂದ ಉತ್ತರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಧರ್ಮಸಿಂಗ್ : ಈಗಾಗಲೇ 100ರೂ.ಗಳನ್ನು ಹೆಚ್ಚು ಮಾಡಿದ್ದೇವೆ. ಮತ್ತೆ ಈ ರೀತಿ ಹೆಚ್ಚು ಮಾಡಿದ್ದಕ್ಕೆ ತಗಲತಕ್ಕ ಒಟ್ಟಾರೆ ವೆಚ್ಚವನ್ನು ಸಹ ಹೇಳಿದ್ದೇವೆ. 4 ತಿಂಗಳಿಗೆ 5 ಕೋಟಿ ಕೊಟ್ಟಿದ್ದೇವೆ (ಗೊಂದಲ)

ಶ್ರೀ ಅಂಜನಮೂರ್ತಿ : ಎರಡು ಹೊತ್ತು ಊಟ ಒಂದು ಹೊತ್ತು ಉಪವಾಸವಿರಬೇಕೆ, ಪೇಪರ್‌ನಲ್ಲಿ ಮಾತ್ರ ಬಿರಿಯಾನಿ ತಿನ್ನಿಸುತ್ತೇನೆ, ಇಷ್ಟು ಕೋಟಿ ಇಷ್ಟು ಕೋಟಿ ಖರ್ಚು ಮಾಡುತ್ತೇವೆಂದು ಕೊಡುತ್ತಾರೆ..

ಶ್ರೀ ಧರ್ಮಸಿಂಗ್ : ಬೇರೆ ಬೇರೆ ಇಲಾಖೆಯವರು ಇದರ ಸಲುವಾಗಿ 18 ಪರ್ಸೆಂಟ್ ಹಣವನ್ನು ಖರ್ಚು ಮಾಡುತ್ತಿಲ್ಲ. ಆ ಹಣವನ್ನು ತೆಗೆದುಕೊಂಡು ವಿದ್ಯಾರ್ಥಿಗಳಿಗೆ ಖರ್ಚು ಮಾಡಬಾರದೇಕೆ ಎಂದು ಅವರು ಕೇಳಿದ್ದಾರೆ. ಆ ರೀತಿ 18 ಪರ್ಸೆಂಟ್ ಹಣವನ್ನು ಖರ್ಚು ಮಾಡಿದವರಿಗೂ ಕೂಡ ಸೂಚನೆ ಮಾಡಿದ್ದೇವೆ. ಆದರೆ 400 ರಿಂದ 500ಕ್ಕೆ ಒಮ್ಮೆಂದೊಮ್ಮೆಗೆ ಮಾಡಲು ಆಗುವುದಿಲ್ಲ. ಅದನ್ನು ಸ್ವಲ್ಪ ನೋಡಬೇಕಾಗುತ್ತದೆ.

Sri. Blasius D'Souza : Question No. 190 (951) is transferred to the Chief Minister as it comes under DPAR.

ಉಪಾಧ್ಯಕ್ಷರೆಯವರು : ಅದನ್ನು ವಿತ್ ಹೆಲ್ಡ್ ಮಾಡಿದ್ದೇವೆ. ಅದಕ್ಕೆ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾಗಿದೆ. ಆದುದರಿಂದ ಅದನ್ನು ತಡೆಹಿಡಿಯಲಾಗಿದೆ.

ಮುಳುಬಾಗಿಲು ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆ

869-ಶ್ರೀ ಎಂ.ವಿ. ವೆಂಕಟಪ್ಪ (ಮುಳುಬಾಗಿಲು): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಳುಬಾಗಿಲು ಪಟ್ಟಣಕ್ಕೆ ನೀರುಸರಬರಾಜು ಮಾಡಲು ಸರ್ಕಾರದವರು ಮಂಜೂರು ಮಾಡಿರುವ ಯೋಜನೆಯು ಸುಮಾರು ಎರಡು ವರ್ಷಗಳಾದರೂ ಸಹ ಪೂರ್ಣಗೊಳಿಸದಿರಲು (ಅತಿ ನಿಧಾನವಾಗಿ ಮುಂದುವರಿಸಲು) ಕಾರಣವೇನು?

ಆ) ಸದರಿ ಯೋಜನೆ ಕೆಲಸ ಕಾರ್ಯಗಳು ಯಾವ ಹಂತದಲ್ಲಿದೆ?

ಇ) ಸದರಿ ಯೋಜನೆಗಳು ಕೆಲವು ಅತ್ಯವಶ್ಯಕ ಮಾರ್ಪಾಡುಗಳಿಗೆ ತಗಲುವ ಅಂದಾಜುಹೆಚ್ಚುವರಿ ಹಣವೆಷ್ಟು? ಹಾಗಿದ್ದಲ್ಲಿ ಒಟ್ಟು ಯೋಜನೆಯ ವೆಚ್ಚವೆಷ್ಟು?

ಈ) ಮುಳಬಾಗಿಲು ಪಟ್ಟಣದಲ್ಲಿ ದಿನಂಪ್ರತಿ ಸರಬರಾಜು ಆಗುತ್ತಿರುವ ನೀರಿನ ಪ್ರಮಾಣವೆಷ್ಟು?

ಉ) ಈ ಮೇಲ್ಕಂಡ ಯೋಜನೆ ಪೂರ್ಣ ಗೊಂಡಾಗ ಸರಬರಾಜು ಆಗುವ ನೀರಿನ ಪ್ರಮಾಣವೆಷ್ಟು ?

ಊ)ಸುಮಾರು 40,000 ಪ್ರಜಾ ಸಂಖ್ಯೆಯುಳ್ಳ ಪಟ್ಟಣಕ್ಕೆ 1993ನೇ ಮಾರ್ಚ್ ಕೊನೆಯೊಳಗೆ ಸದರಿಯೋಜನೆಯನ್ನು ಪೂರ್ಣಗೊಳಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಚೌಡಾ ರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಈ ಯೋಜನೆಯು ಸೆಪ್ಟೆಂಬರ್ 1991ರಲ್ಲಿ ಆಡಳಿತಾತ್ಮಕವಾಗಿ ಮಂಜೂರಾಗಿದೆ. ಉದ್ದೇಶಿತ ಸ್ಥಳದಲ್ಲಿ ಕೊಳವೆ ಬಾವಿ ಕೊರೆಯಲು ರೈತರಿಂದ ಆಡಚಣೆ ಉಂಟಾದುದರಿಂದ ಈ ಕೆಲಸ ಪೂರ್ಣಗೊಳಿಸಲು ವಿಳಂಬವಾಗಿದೆ.

ಆ) 12 ಕೊರೆದ ಕೊಳವೆ ಬಾವಿಗಳಲ್ಲಿ 10 ಫಲಪ್ರದವಾಗಿವೆ. ಸಂಪು ತೊಟ್ಟಿಯನ್ನು ಕಟ್ಟುವ ಕೆಲಸ ಪೂರ್ತಿಗೊಳ್ಳುವ ಹಂತದಲ್ಲಿದೆ. ಪಂಪು ಮನೆ ಕಟ್ಟುವ ಕೆಲಸ ಮುಗಿದಿದೆ. ಕೊಳವೆ ಬಾವಿಗಳಿಂದ ಸಂಪು ಟ್ಯಾಂಕಿಗೆ ನೀರನ್ನು ಹಾಯಿಸಲು ಬೇಕಾಗುವ ಪಿ.ವಿ.ಸಿ. ಕೊಳವೆ ಹಾಕಲಾಗಿದೆ. ಸಂಪು ಟ್ಯಾಂಕಿನಿಂದ ಮೇಲಟ್ಟಿದ ಟ್ಯಾಂಕಿಗೆ ನೀರನ್ನು ಹಾಯಿಸಲು ಬೇಕಾಗುವ ಬೀಡು ಕಬ್ಬಿಣದ ಕೊಳವೆಯನ್ನು ಖರೀದಿಸಲು ಕ್ರಮ ತೆಗೆದುಕೊಳ್ಳಲಾಗಿದೆ. 5 ಲಕ್ಷ ಲೀಟರ್ ಮೇಲಟ್ಟಿದ ಆರ್.ಸಿ.ಸಿ. ಟ್ಯಾಂಕನ್ನು ನಿರ್ಮಿಸಲು ಸ್ಥಳ ಇತ್ಯರ್ಥವಾಗಿದ್ದು, ಕೆಲಸಕ್ಕೆ ಗುತ್ತಿಗೆದಾರರನ್ನು ನೇಮಿಸಲು ಟೆಂಡರು ಕರೆಯಲಾಗುತ್ತಿದೆ.

ಇ) ಹೆಚ್ಚುವರಿ ಹಣ ಸುಮಾರು ರೂ. 38.20 ಲಕ್ಷ ರೂಪಾಯಿಗಳಾಗಲಿದೆ. ಒಟ್ಟು ಯೋಜನಾ ವೆಚ್ಚವು ಸುಮಾರು 67.00 ಲಕ್ಷ ರೂ.ಗಳಾಗಬಹುದು.

ಈ) ದಿನಂಪ್ರತಿ ತಲಾ 50 ಲೀಟರ್ ಆಗಿದೆ.

ಉ) ದಿನಂಪ್ರತಿ ತಲಾ 100 ಲೀಟರ್ ನೀರನ್ನು ಒದಗಿಸಬಹುದು.

ಊ) ಈ ಯೋಜನೆಯನ್ನು ಹಾಲಿ ಇರುವ ಮೇಲಟ್ಟಿದ ಆರ್.ಸಿ.ಸಿ. ಟ್ಯಾಂಕಿಗೆ ಕೊಳವೆ ಬಾವಿಗಳಿಂದ ನೀರನ್ನು ಪಂಪು ಮಾಡಿ 1993ನೇ ಇಸವಿ ಮಾರ್ಚ್ ಅಂತ್ಯದೊಳಗೆ ಪಟ್ಟಣಕ್ಕೆ ಕುಡಿಯುವ ನೀರನ್ನು ಸರಬರಾಜು ಮಾಡಲು ಉದ್ದೇಶಿಸಿದೆ.

ಶ್ರೀ ಎಂ.ವಿ. ವೆಂಕಟಪ್ಪ : ಸನ್ಮಾನ್ಯ ಉಪಾಧ್ಯಕ್ಷಣೆಯವರೆ, ಉತ್ತರದಲ್ಲಿ 10 ಬೋರ್ ವೆಲ್‌ಗಳಲ್ಲಿ ನೀರು ಸಿಕ್ಕಿದೆ ಎಂದು ಹೇಳಿದ್ದಾರೆ. ಅದರಲ್ಲಿ ಒಟ್ಟಾರೆ ಎಷ್ಟು ಗ್ಯಾಲನ್ ನೀರು ಸಿಕ್ಕಿದೆ ಎಂಬ ಬಗ್ಗೆ ಮಾಹಿತಿ ಇದ್ದರೆ ಹೇಳುತ್ತೀರ?

ಶ್ರೀ ಚೌಡರೆಡ್ಡಿ : ಸನ್ಮಾನ್ಯ ಉಪಾಧ್ಯಕ್ಷಣೆಯವರೆ, 1991ರಲ್ಲಿ ವಾಟರ್ ಸಪ್ಲೈಗೋಸ್ಕರ 28.8 ಲಕ್ಷ ರೂಪಾಯಿಗಳು ಮಂಜೂರಾತಿಯಾಗಿದೆ. ನಂತರ ಮಾನ್ಯ ಸದಸ್ಯರಿಗೆ ಗೊತ್ತಿರುವಾಗೆ ನಾವು ಬೋರ್‌ವೆಲ್‌ಗಳನ್ನು ಅಲ್ಲಿ ತೆಗೆಯಲು ಹೋದಾಗ ಬಹಳ ತೊಂದರೆಯಾಯಿತು. ಅಲ್ಲಿನ ರೈತರು ಗಲಾಟೆ ಮಾಡಿ ಬೊರ್‌ವೆಲ್ ಹಾಕಲು ಬಿಡಲಿಲ್ಲ. ತದನನಂತರ ಅವರೇ ಬಂದು ಸಮಸ್ಯೆಯನ್ನು ಬಗೆಹರಿಸಿ, ಈಗ ಅಲ್ಲಿ ಬೋರ್ ವೆಲ್‌ನ್ನು ಹಾಕಿದ್ದೇವೆ. ಅಲ್ಲಿ ಈಗ ಬೇಕಾದಷ್ಟು ನೀರು ಸಿಗುತ್ತಿದೆ.

9.50 ಪಿ.ಎಂ.

ಮೊದಲು ವಾಟರ್ ಟ್ಯಾಂಕ್ ಕೆಪ್ಯಾಸಿಟಿ 2.5 ಲಕ್ಷ ಲೀಟರ್ ಇರಬೇಕೆಂದು ನಿರ್ಧಾರವಾಗಿತ್ತು. ಆನಂತರ ಅದನ್ನು 5 ಲಕ್ಷ ಲೀಟರ್‌ಗೆ ಪರಿವರ್ತನೆ ಮಾಡಿದ್ದರಿಂದ ಸ್ವಲ್ಪಮಟ್ಟಿಗೆ ತಡವಾಗುತ್ತಿದೆ. ಆದರೂ ಇದನ್ನು ಬೇಗ ಮಾಡಿಸಿಕೊಡುತ್ತೇವೆ.

ಶ್ರೀ ಎಂ.ವಿ. ವೆಂಕಟಪ್ಪ : 1993ನೇ ಇಸವಿಯ ಮಾರ್ಚಿ ಅಂತ್ಯದೊಳಗೆ ಎಂದು ಹೇಳಿದ್ದೀರಿ. ಮಾರ್ಚಿ 24ನೇ ತಾರೀಖು ಯುಗಾದಿ ಹಬ್ಬ ಬರುತ್ತದೆ. ಆದ್ದರಿಂದ ಕೊನೆಯ ಪಕ್ಷ ಯುಗಾದಿ ಹಬ್ಬದ ದಿವಸವಾದರೂ ಅಲ್ಲಿಂದ ನೀರನ್ನು ಕೊಡುತ್ತಾರಾ? ನೋಡುತ್ತೇವೆಂದು ಹೇಳುವುದು ಬೇಡ. ಖಂಡಿತವಾಗಿಯೂ ಕೊಡಲೇಬೇಕು.

ಶ್ರೀ ಚೌಡರೆಡ್ಡಿ : ಖಂಡಿತವಾಗಿ ಕೊಡುತ್ತೇವೆ.

ದ.ಕನ್ನಡ ಜಿಲ್ಲೆಯಲ್ಲಿ ಆಶ್ರಯ ಯೋಜನೆಯ ಮನೆಗಳು.

980Ëಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ): ಮಾನ್ಯ ವಸತಿ ಸಚಿವವು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಎಷ್ಟು ಮನೆಗಳನ್ನು ಕಟ್ಟಲಾಗಿದೆ?

ಆ) ಅವುಗಳಲ್ಲಿ ಪೂರ್ತಿಯಾದದ್ದು ಎಷ್ಟು? ಹಾಗೂ ಅರ್ಧಾಂಶ ಆದದ್ದು ಎಷ್ಟು?

ಇ) ಈ ಮನೆಗಳನ್ನು ಕಟ್ಟಲು ಯಾರಿಗೆ ಗುತ್ತಿಗೆಯನ್ನು ಕೊಡಲಾಗಿದೆ (ಅವರ ವಿವರವನ್ನು ಒದಗಿಸುವುದು)

ಈ) ಜಿಲ್ಲೆಯಲ್ಲಿ ನಿಗದಿಯಾದ ಮನೆಗಳೆಷ್ಟು? ಹಾಗೂ ಅವುಗಳನ್ನು ಯಾವಾಗ ಕಟ್ಟಿ ಪೂರೈಸಲಾಗುವುದು.

ಶ್ರೀ ಗೋಪಿನಾಥ್ ಆರ್. ಸಾಂಡ್ರ (ವಸತಿ ಸಚಿವರು):

ಅ) 407 ಮನೆಗಳ ಕಾಮಗಾರಿ ಕೆಲಸಗಳು ವಿವಿಧ ಹಂತಗಳಲ್ಲಿವೆ.

ಆ) ಯಾವ ಮನೆಯು ಪೂರ್ಣಗೊಂಡಿಲ್ಲ. 40 ಮನೆಗಳು ಅರ್ಧಾಂಶದಲ್ಲಿದೆ.

ಇ) ಐದು ಜನ ಗುತ್ತಿಗೆದಾರರಿಗೆ ಕೊಟ್ಟಿದ್ದು, ಅವರುಗಳ ವಿವರಗಳನ್ನು ಅನುಸೂಚಿ 'ಅ' ದಲ್ಲಿ ಒದಗಿಸಿದೆ.

ಈ) 15,000 ಅವುಗಳಲ್ಲಿ ಪ್ರಗತಿಯಲ್ಲಿರುವ 407 ಮನೆಗಳನ್ನು ಮಾರ್ಚ್ 93ರ ವೇಳೆಗೆ ಪೂರ್ಣಗೊಳಿಸಲಾಗುವುದು.